**O.S.No. 46/2026**
**PW2**

ದಿನಾಂಕ 12.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ವಾದಿಯ ಪರವಾಗಿ ಸಾಕ್ಷಿಯ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ. ಎಸ್.ಕೆ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು ಸಾಕ್ಷಿಯಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ಪಾಟೀ ಸವಾಲುಃ ಪ್ರತಿವಾದಿ ಪರ ಸಹಾಯಕ ಸರ್ಕಾರಿ ವಕೀಲರಿಂದಃ

ನನ್ನ ಮಗನ ಜನನ ಪ್ರಮಾಣ ಪತ್ರ ನನ್ನ ಬಳಿ ಇಲ್ಲ. ನನ್ನ ಮಗನನ್ನು ನಮ್ಮ ಮನೆಯಲ್ಲಿ ಅಶೋಕ್ ಎಂದು ಕರೆಯುತ್ತಿದ್ದೆವು. ಸಾಕ್ಷಿಯು ಮುಂದುವರಿದು ನನ್ನ ಮಗನ ಜಾತಕದ ಪ್ರಕಾರ ಅವನ ಭವಿಷ್ಯದ ಉದ್ದೇಶದಿಂದ ಅವರ ಹೆಸರನ್ನು ಶೇಷಪ್ಪ ಗೌಡ ಎಂದು ಶಾಲೆಯಲ್ಲಿ ದಾಖಲಿಸಬೇಕೆಂದು ಜ್ಯೋತಿಷ್ಯದವರು ತಿಳಿಸಿದ ಕಾರಣ ಶಾಲೆಯಲ್ಲಿ ಶೇಷಪ್ಪ ಗೌಡ ಎಂದು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ಮಗ 9 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತಾನೆ. ಶಾಲಾ ದಾಖಲಾತಿಗಳಲ್ಲಿ ನನ್ನ ಮಗನ ಹೆಸರು ಶೇಷಪ್ಪ ಗೌಡ ಎಂದು ದಾಖಲಾಗಿರುತ್ತದೆ. ನನ್ನ ಮಗ ಮರಣ ಹೊಂದಿದ ಸಮಯದಲ್ಲಿ ಸಂಬಂಧಪಟ್ಟ ಇಲಾಖೆಗೆ ಮಾಹಿತಿಯನ್ನು ನನ್ನ ಸೊಸೆ ಅಂದರೆ ವಾದಿ ನೀಡಿರುತ್ತಾರೆ. ಆ ಸಂದರ್ಭದಲ್ಲಿ ನನ್ನ ಮಗನ ಹೆಸರನ್ನು ಶೇಷಪ್ಪ ಗೌಡ ಎಂದು ಮಾತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಬದಲಾವಣೆ ಮಾಡಿಕೊಳ್ಳುವ ಸಲುವಾಗಿ ನನ್ನ ಮಗನ ಹೆಸರನ್ನು ಶೇಷಪ್ಪ ಗೌಡ ಅಲಿಯಾಸ್ ಅಶೋಕ್ ಗೌಡ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸೊಸೆಗೆ ಸಹಾಯ ಮಾಡುವ ಸಲುವಾಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)